ಶ್ರೀ ಬಿ. ರಾಜುಗೌಡ.—ವಿಶ್ವವಿದ್ಯಾನಿಲಯಗಳಲ್ಲಿ ಹಂಗಾಮಿಯಾಗಿ ೧೫ ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ. ಈ ಬಗ್ಗೆ ಸರ್ಕಾರಿ ಆಜ್ಞೆ ಹೊರಡಿಸಿದ್ದರೂ ಅವರನ್ನು ಖಾಯಂ ಮಾಡಿಲ್ಲ. ಈ ಬಗ್ಗೆ ಉಪಕುಪತಿಗಳಿಗೆ ಆದೇಶ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ವಿಶ್ವವಿದ್ಯಾನಿಲಯಗಳಿಗೂ ತಿಳಿಸಿದ್ದೇವೆ. ಅವರು ಸರಿಪಡಿಸುತ್ತಾರೆಂದು ಭಾವಿಸಿಕೊಂಡಿದ್ದೇವೆ.

ಶಹಾಬಾದ್‌ನ ಸರಕಾರಿ ಆಸ್ಪತ್ರೆ

೩೯ (೨೦೩) ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಶಹಾಬಾದ್ ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಹಾಸಿಗೆಗಳ ವ್ಯವಸ್ಥೆ ಇದೆ ? ಮತ್ತು ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಯಾವ ಯಾವ ಸೌಲಭ್ಯ ದೊರಕುವುದು ?

ಆ) ಈ ಕಟ್ಟಡದ ಶಂಕುಸ್ಥಾಪನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ೧೯೮೪ರಲ್ಲಿ ಮಾಡಿದ್ದು ಈ ಕಟ್ಟಡದ ಕಾರ್ಯ ಇನ್ನೂ ಕುಂಟುತ್ತಾ ನಡೆದಿರಲು ಕಾರಣವೇನು ?

ಇ) ಒಟ್ಟು ಎಷ್ಟು ಹಣದಲ್ಲಿ ಈ ಆಸ್ಪತ್ರೆ ತಯಾರಾಗುವ ನಿರೀಕ್ಷೆ ಇದೆ ? ಮತ್ತು ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ? ಪ್ರಸ್ತುತ ವರ್ಷದಲ್ಲಿ ಎಷ್ಟು ಹಣ ಒದಗಿಸಲಾಗಿದೆ ?

ಈ) ೧೯೮೭–೮೮ ರೊಳಗಾಗಿ ಈ ಆಸ್ಪತ್ರೆ ಕಟ್ಟಡ ಪೂರ್ತಿಮಾಡಲಾಗುವುದೆ ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಶಹಾಬಾದ್ ಸರ್ಕಾರಿ ಆಸ್ಪತ್ರೆಯಲ್ಲಿ ಹಾಲಿ ನಾಲ್ಕು ಹಾಸಿಗೆಗಳ ಸೌಲಭ್ಯವಿದ್ದು ಪ್ರಸ್ತುತ ಪ್ರಾಥಮಿಕ ಆರೋಗ್ಯ ಚಿಕಿತ್ಸಾ ಸೇವೆಗಳನ್ನೊದಗಿಸಲಾಗುತ್ತಿದೆ.

ಆ) ಶಹಾಬಾದ್‌ನಲ್ಲಿ ೩೦ ಹಾಸಿಗೆಗಳ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಈಗಾಗಲೇ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಕಟ್ಟಡ ನಿರ್ಮಾಣಕಾರ್ಯ ಈಗ ಪ್ರಗತಿಯಲ್ಲಿದೆ.

ಇ) ಕಟ್ಟಡ ನಿರ್ಮಾಣವನ್ನು ಒಟ್ಟು ೮,೮೦,೦೦೦ ರೂ.ಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ಇದಕ್ಕಾಗಿ ೧೯೮೫–೮೬ನೇ ಸಾಲಿನವರೆಗೂ ೪೩,೦೦೦ ರೂ.ಗಳು ಖರ್ಚಾಗಿವೆ. ಪ್ರಸ್ತುತ ವರ್ಷದಲ್ಲಿ ಇದಕ್ಕೆ ೧,೦೦,೦೦೦ ರೂ.ಗಳನ್ನು ಒದಗಿಸಲಾಗಿದೆ.

ಈ) ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ೬೨ ಸಾವಿರ ಜನಸಂಖ್ಯೆ ಇರತಕ್ಕ ಪಟ್ಟಣದಲ್ಲಿ ಕೇವಲ ೩೦ ಹಾಸಿಗೆಗಳ ಆಸ್ಪತ್ರೆ ಕಟ್ಟಡಕ್ಕೆ ೧೯೮೪ರಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಅಡಿಗಲ್ಲು ಹಾಕಿದರು. ಅಂದು ಮೂರು ಕಟ್ಟಡಗಳಿಗೆ ಅಡಿಗಲ್ಲು ಹಾಕಿದ್ದರು. ಆ ಪೈಕಿ ಕೆ.ಎಸ್.ಆರ್.ಟಿ.ಸಿ. ಕಟ್ಟಡದ ಕೆಲಸ ಮುಗಿಯುತ್ತಾ ಇದೆ. ದವಾಖಾನೆಗೆ ಸಂಬಂಧಪಟ್ಟಂತೆ ಅಲ್ಲಿ, ವಾಸ ಮಾಡುವ ವೈದ್ಯರಿಗೆ ಹಾಗೂ ದಾದಿಯರಿಗೆ ಸಂಬಂಧಪಟ್ಟಂತೆ ೩೦ ಲಕ್ಷ ರೂಪಾಯಿಗಳ ಪ್ರಾಜೆಕ್ಟ್‌ನ್ನು ೧೯೮೩ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಕಟ್ಟಡಕ್ಕಾಗಿ ೮೪–೮೫ರಲ್ಲಿ ೪೩,೦೦೦ ರೂಪಾಯಿಗಳಲ್ಲಿ ಈ ವರ್ಷ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ರೀತಿ ಕೊಡುತ್ತಾ ಹೋದರೆ ಇನ್ನು ೧೦ ವರ್ಷಗಳಾದರೂ ಈ ಆಸ್ಪತ್ರೆ ಕಟ್ಟಡ ಮುಗಿಯುವುದಿಲ್ಲ. ಇವೊತ್ತು ಶಹಾಬಾದ್ ಪಟ್ಟಣ ಬಹಳ ಸ್ಲಂನಿಂದ ಕೂಡಿದ್ದು ಆ ಊರಿನಲ್ಲಿ ತ್ವರಿತವಾಗಿ ಆರೋಗ್ಯದ ಬಗ್ಗೆ ಚಿಂತನೆ ಮಾಡಬೇಕಾಗಿದ್ದು ಇನ್ನು ಎರಡು ವರ್ಷದೊಳಗಾದರೂ ಆಸ್ಪತ್ರೆ ಕಟ್ಟಡವನ್ನು ಮುಗಿಸುವ ಬಗ್ಗೆ ಭರವಸೆ ಕೊಡುತ್ತೀರಾ ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ, ಈ ವರ್ಷ ಒಂದುಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ ಮುಂದಿನ ವರ್ಷ ಹೆಚ್ಚು ಕೊಡುವುದಕ್ಕೆ ಪ್ರಯತ್ನ ಮಾಡುವುದರ ಜೊತೆಗೆ ಕಟ್ಟಡದ ಕೆಲಸವನ್ನು ಒಂದೆರಡು ವರ್ಷಗಳಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡಲಾಗುವುದೆನ್ನುವ ಭರವಸೆ ಕೊಡುತ್ತೇನೆ.

ಅಧ್ಯಕ್ಷರು.—ಸಮರ್ಪಕ ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ.ಬಿ. ಶಾಣಪ್ಪ.—ಉಳಿದೇ ಇಸವಿಯೊಳಗಾದರೂ ಇದನ್ನು ಮುಗಿಸುತ್ತೀರಾ ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸರ್ವ ಪ್ರಯತ್ನ ಮಾಡುತ್ತೇನೆ.

ಸರ್ಕಾರಿ ಕಛೇರಿಗಳಲ್ಲಿ ೫ ದಿನಗಳ ಕೆಲಸದ ಬಗ್ಗೆ

೪೦ (೧೬೦) ಶ್ರೀ ಆರ್. ವೆಂಕಟರಾಮಯ್ಯ ಮತ್ತು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯ, ಕೇಂದ್ರ ಮತ್ತು ಆಂಧ್ರ ಸರ್ಕಾರಗಳು ಮಾಡಿದ ಆಡಳಿತ ಸುಧಾರಣೆಯನ್ನನುಸರಿಸಿ ಕಛೇರಿಗಳಲ್ಲಿ ವಾರಕ್ಕೆ ೬ ದಿನ ಕೆಲಸವನ್ನು ೫ ದಿನಕ್ಕೆ ಇಳಿಸಲಾಗಿದೆಯಲ್ಲವೆ ?

ಆ) ಇದರಿಂದ ಸೋಮವಾರ ಮತ್ತು ಶುಕ್ರವಾರ ಕೂಡಾ ಕಛೇರಿಗಳಲ್ಲಿನ ಕೆಲಸ ಸರಿಯಾಗಿ ನಡೆಯದೆ ಆಡಳಿತ ವ್ಯವಸ್ಥೆಯಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ಪ್ರಾರಂಭವಾಗಿ ಇದನ್ನು ಬದಲಾಯಿಸಬೇಕೆಂದು ಎಲ್ಲಾ ವರ್ಗದ ಜನರು ಕೋರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಆಂಧ್ರ ಪ್ರದೇಶದ ಸರ್ಕಾರ ಕೂಡಾ ಈ ನೀತಿಯನ್ನು ಪುನರ್ವಿಮರ್ಶಿಸಿ ಶನಿವಾರ ಸಹ ಸರ್ಕಾರಿ ಕೆಲಸ ಮಾಡುವ ದಿನವೆಂದು ಘೋಷಿಸಿದೆಯಲ್ಲವೆ ?

ಈ) ಹಾಗಿದ್ದಲ್ಲಿ, ರಾಜ್ಯ ಸರ್ಕಾರದವರು ಸಹ ಸಾಮಾನ್ಯ ಜನರ ಮತ್ತು ಸರ್ಕಾರಿ ಆಡಳಿತದ ಹಿತದೃಷ್ಟಿಯಿಂದ ವಾರಕ್ಕೆ ೬ ದಿನದ ಕೆಲಸವನ್ನು ಪುನಃ ಜಾರಿಗೆ ತರಲು ಉದ್ದೇಶಿಸುವರೇ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಆಡಳಿತ ಸುಗಮವಾಗಿ ನಡೆಯಬೇಕೆಂಬ ಉದ್ದೇಶದಿಂದ ಈ ಸುಧಾರಣೆಯನ್ನು ಜಾರಿಗೆ ತಂದಿದ್ದರೂ ಕೆಲವು ಮಹನೀಯರು ಇದನ್ನು ಬದಲಾಯಿಸಬೇಕೆಂದು ಕೋರಿದ್ದಾರೆ.

ಇ) ಹೌದು.

ಈ) ಪರಿಶೀಲನೆಯಲ್ಲಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಸರ್ಕಾರದವರು ಇತ್ತೀಚೆಗೆ ೬ ದಿನಗಳ ಕೆಲಸವನ್ನು ೫ ದಿನಕ್ಕೆ ಇಳಿಸಿದ್ದಾರೆ. ನಮಗೆಲ್ಲಾ ತಿಳಿದಿರುವಂತೆ ಸರ್ಕಾರಿ ನೌಕರರು ಸೋಮವಾರ ೧೦-೩೦ಕ್ಕೆ ಬರುತ್ತಾರೆ, ಶುಕ್ರವಾರ ಮಧ್ಯಾಹ್ನ ಬಿಡುತ್ತಾರೆ. ಸರ್ಕಾರದ ಆಡಳಿತ ಸುಗಮವಾಗಿ ನಡೆಯಲಿ ಎನ್ನುವ ಉದ್ದೇಶದಿಂದ ಇದನ್ನು ಮಾಡಲಾಗಿದೆಯೆಂದು ತಿಳಿಸಿದ್ದೀರಿ ಆಡಳಿತ ಸುಗಮವಾಗಿ, ದಕ್ಷತೆಯಿಂದ ಹಾಗೂ ಚುರುಕಿನಿಂದ ನಡೆಯುತ್ತಿದೆಯೇ ? ಒಂದು ದಿವಸ ಸರ್ಕಾರದ ಕೆಲಸ ಕಾರ್ಯ ನಡೆಯುವುದಕ್ಕಾದರೆ ಸರ್ಕಾರದ ಬೊಕ್ಕಸಕ್ಕೆ ೨೭೦ ಕೋಟಿ ರೂಪಾಯಿಗಳು ಖರ್ಚಾಗುತ್ತಿದೆ. ಸೋಮವಾರ ಮತ್ತು ಶುಕ್ರವಾರ ಅರ್ಧರ್ಧ ದಿವಸ ಸೇರಿದರೆ ೫೫೦ ಕೋಟಿ ನಷ್ಟವಾಗುತ್ತದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆಂಧ್ರ ಪ್ರದೇಶದವರು ೫ ದಿನಗಳ ಕೆಲಸ ಸರಿಹೊಂದಲಿಲ್ಲವೆಂದು ಮತ್ತೆ ೬ ದಿವಸಗಳ ಕೆಲಸ ಮಾಡುವಂತೆ ಮಾಡಿದ್ದಾರೆ. ಆ ರೀತಿ ಇಲ್ಲೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರಶ್ನೆ ಕೇಳುವ ಬದಲು ಅವರು ಸೂಚನೆ ಕೊಟ್ಟಿದ್ದಾರೆ, ನಾನು ಹೇಳುವುದು ಇಷ್ಟೆ. ಪಾರದಲ್ಲಿ ೫ ದಿವಸದ ಕೆಲಸವನ್ನು ನಾವಾಗಿಯೇ ಪ್ರಥಮತ ಮಾಡಲಿಲ್ಲ. ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರ ಅನೇಕ ರಾಜ್ಯ ಸರ್ಕಾರಗಳು ಹೊಸ ಈ ನಿರ್ಣಯ ತೆಗೆದುಕೊಂಡ ಮೇಲೆ ನಾವು ಕೂಡ ತೆಗೆದುಕೊಂಡೆವು. ಅಷ್ಟೇ ಅಲ್ಲ. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಕೂಡ ೫ ದಿವಸದ ಕೆಲಸದ ಜಾರಿಯಲ್ಲಿದೆ. ಇದರ ಮೂಲ ಉದ್ದೇಶ ಏನೆಂದರೆ ೫ ದಿವಸ ಚೆನ್ನಾಗಿ ಕೆಲಸ ಮಾಡಬೇಕು ದಕ್ಷತೆಯಿಂದ ಕೆಲಸ ಮಾಡಬೇಕು, ಕಷ್ಟ ಪಟ್ಟು ಕೆಲಸ ಮಾಡಬೇಕು ಎಂದು ಉಳಿದ ಎರಡು ದಿವಸಗಳ ಕಾಲ ಓದುವುದು, ಬರೆಯುವುದು, ಮನರಂಜನೆಗಳಲ್ಲಿ ಭಾಗವಹಿಸುವುದು. ಸೋಮವಾರ ದಿವಸ ಪ್ರಫುಲ್ಲಿತವಾದ ಮನಸ್ಸಿನಿಂದ ಕಚೇರಿಗೆ ಬರಬೇಕು ಎನ್ನುವ ಉದ್ದೇಶದಿಂದ